**ಸಾಕ್ಷಿಯನ್ನು ದಿನಾಂಕಃ 16.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 21 ನೇ ಪ್ರತಿವಾದಿಯ ಪರ ಶ್ರೀಮತಿ. ಹೆಚ್.ವಿ.ಎಸ್. ವಕೀಲರಿಂದಃ**

ನನಗೆ ನ್ಯಾಯಾಲಯಕ್ಕೆ ಬರುವಂತೆ ನೋಟೀಸ್ ಬಂದಿರುತ್ತದೆ. ನಾನು ಹೆಚ್.ಡಿ. ಕೋಟೆ ಟೌನ್ ನಲ್ಲಿ ವಾಸವಿರುತ್ತೇನೆ. ವಾದಿ ಲೋಲಮ್ಮರವರು ಜೆಯಾರ ಕಾಲೋನಿ ಗ್ರಾಮದ ವಾಸಿಯಾಗಿರುತ್ತಾರೆ. ವಾದಿಗಳು ನನ್ನ ಸಂಬಂಧಿಗಳು. ನನ್ನ ಅಣ್ಣನ ಮಗನಿಗೆ 2 ನೇ ವಾದಿಯ ಮಗಳನ್ನು ತಂದಿದ್ದು ಆ ಮೂಲಕ ಸಂಬಂಧಿಗಳಾಗಿರುತ್ತೇವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವ್ಯವಹಾರದ ಬಗ್ಗೆ ನನಗೆ ಗೊತ್ತಿರುತ್ತದೆ. ದಾವಾ ಆಸ್ತಿಯು ಜವರಯ್ಯರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯನ್ನು ಸದರಿ ಜವರಯ್ಯರವರು ದಿನಾಂಕಃ 23.10.1944 ರಂದು ಕೋಡೀಗೌಡ ಎನ್ನುವವರಿಂದ ಖರೀದಿಸಿರುತ್ತಾರೆಂದರೆ ಸರಿ. ದಿನಾಂಕಃ 30.04.1975 ರಂದು ಸದರಿ ಜವರಯ್ಯನವರು ದಾವಾ ಆಸ್ತಿಯನ್ನು ಲಿಂಗಾಜಮ್ಮ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜವರಯ್ಯರವರ ಮಗ ಪುಟ್ಟರಾಜಯ್ಯ ಆ ರೀತಿ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ಆ ಬಗ್ಗೆ ನ್ಯಾಯಾಲಯಕ್ಕೆ ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಆ ಬಗ್ಗೆ ವಕೀಲರಿಗೆ ಗೊತ್ತಿರುತ್ತದೆಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಡೆದ ಯಾವ ಕ್ರಯದ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಬದಲಾಗಿ ವಾದಿಗಳು ನನ್ನ ಸಂಬಂಧಿಕರಾದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಈ ದಾವೆಯನ್ನು ಒಟ್ಟು 03 ಎಕರೆ 23 ಗುಂಟೆ ಹಾಗು 29 ಗುಂಟೆಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ಅದು ಹೊನ್ನೂರುಕುಪ್ಪೆ ಗ್ರಾಮದ ಸ.ನಂ. 19 ಆಗಿರುತ್ತದೆ. ವಾದಿಗಳು ಈ ದಾವೆಯಲ್ಲಿ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಂದು ನಾನು ನೋಡಿರುವುದಿಲ್ಲ. ವಾದಿಯು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಸುಳ್ಳು ದಾವೆ ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**2, 7, 10 ರಿಂದ 19 ನೇ ಪ್ರತಿವಾದಿಗಳು ಗೈರು ಹಾಜರಾಗಿದ್ದು, ಪಾಟೀ ಸವಾಲು ಇರುವುದಿಲ್ಲವೆಂದು ಪರಿಗಣಿಸಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**